# ಉದಯವಾಣಿ ಚುನಾವಾಣಿ

ರಾಜಕಾರಣಿಗಳಂತೆ ಕೆಲ ಐಎಎಸ್ ಅಧಿಕಾರಿಗಳೂ ಜಾತಿ ರಾಜಕೀಯ ಮಾಡುತ್ತಿದ್ದಾರೆ. ಇದರಿಂದ ಸಮಾಜದ ಏಳ್ಗೆ ಅಸಾಧ್ಯ.
■ ಕೆ.ಎಸ್.ಈಶ್ವರಪ್ಪ, ಬಿಜೆಪಿ ನಾಯಕ





ದೇವೇಗೌಡರು ದೊಡ್ಡ ನಾಟಕಕಾರ. ಅವರ ರಾಜಕಾರಣ ನರೇಂದ್ರ ಮೋದಿಗಿಂತ ಹೆಚ್ಚು ಅಪಾಯಕಾರಿ.
■ ರೆಹಮಾನ್ ಖಾನ್, ಕೇಂದ್ರ ಸಚಿವ

ನನ್ನ ಬಗ್ಗೆ ಹಗುರವಾಗಿ ಮಾತನಾಡುವ ಡಿಕೆಶಿ ಇನ್ನು 5 ತಿಂಗಳಲ್ಲಿ ಯಾವ ರೀತಿ ತೊಂದರೆಗೆ ಒಳಗಾಗುತ್ತಾರೆ ಕಾದು ನೋಡಿ.
■ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ





ಮೋದಿಗೆ ತಾವು ಪ್ರಧಾನಿಯಾಗುವುದಿಲ್ಲ ಎಂಬುದು ಗೊತ್ತಿದೆ. ಹೀಗಾಗಿಯೇ ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿಲ್ಲ.
■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ಏಕಕಾಲದಲ್ಲಿ ನಡೆಸಬೇಕು. ಆಗ ಖರ್ಚು ಹಾಗೂ ಶ್ರಮ ಕಡಿಮೆಯಾಗುತ್ತದೆ.
■ ಶಿವಮೂರ್ತಿ ಮುರುಘಾ ಶರಣರು, ಚಿತ್ರದುರ್ಗ



ಟ್ವಿಟಾಪತ್ರಿ: ಒಂದು ವೇಳೆ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಾರ್ಟಿ ಭಾರತದಲ್ಲಿ ಅಧಿಕಾರಕ್ಕೆ ಬಂದರೆ ಏನಾಗಬಹುದು? -ವಿಶ್ವಸಂಸ್ಥೆಯೇ ಭಾರತದ ಪರ್ಮನೆಂಟ್ ಸದಸ್ಯ ರಾಷ್ಟ್ರ ಆಗಬಹುದು. ■ ಲೋಡಿಆಶಿ

## ಪಂಚ್‌ರ್!

ಮೋದಿಯನ್ನು ನರಹಂತಕ ಎನ್ನುವುದು ತರವಲ್ಲ -ಈಶ್ವರಪ್ಪ.

-ವೀರಪ್ಪನ್ ಕಡೆಯವರು ಬೇಜಾರು ಮಾಡ್ಕಂಡ್ರೆ ಅಂತ ಮುಂದಾಲೋಚನೆಯೇ!

## ಆಸ್ತಿ ವಿವರ: ಮೊಯ್ಲಿ, ಎಚ್‌ಡಿಕೆ ವಿರುದ್ಧ ದೂರು

**ಬೆಂಗಳೂರು:** ಆಸ್ತಿಯ ಬಗ್ಗೆ ಅಪೂರ್ಣ ಮಾಹಿತಿ ನೀಡಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿರುವ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ. ವೀರಪ್ಪ ಮೊಯ್ಲಿ ಹಾಗೂ ಜೆಡಿಎಸ್ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರ ಉಮೇದುವಾರಿಕೆ ತಿರಸ್ಕರಿಸಬೇಕು ಎಂದು ಜೆಡಿಯು ಅಭ್ಯರ್ಥಿ ಜಿ.ಕೆ.ಸಿ. ರೆಡ್ಡಿ, ರಾಜ್ಯ ಮುಖ್ಯ ಚುನಾವಣಾಧಿಕಾರಿ ಅವರನ್ನು ಒತ್ತಾಯಿಸಿದ್ದಾರೆ. ಈ ಸಂಬಂಧ ಶುಕ್ರವಾರ ರಾಜ್ಯ ಮುಖ್ಯ ಚುನಾವಣಾಧಿಕಾರಿಯವರಿಗೆ ದೂರು ಸಲ್ಲಿಸಿರುವ ರೆಡ್ಡಿ, ವೀರಪ್ಪ ಮೊಯ್ಲಿ ಹಾಗೂ ಕುಮಾರಸ್ವಾಮಿ ಅವರು ನಾಮಪತ್ರ ಸಲ್ಲಿಸುವಾಗ ತಮ್ಮ ಮಕ್ಕಳು ಹಾಗೂ ಇತರೆ ಅವಲಂಬಿತರ ಆಸ್ತಿ ವಿವರವನ್ನು ಸಲ್ಲಿಸಿಲ್ಲ. ಆ ಮೂಲಕ ಪ್ರಜಾಪ್ರತಿನಿಧಿ ಕಾಯ್ದೆಯ ಸ್ಪಷ್ಟ ಉಲ್ಲಂಘನೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಇವರಿಬ್ಬರ ನಾಮಪತ್ರಗಳನ್ನು ತಿರಸ್ಕರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸುವ ಯಾವುದೇ ಅಭ್ಯರ್ಥಿ ತನ್ನ ಹಾಗೂ ಅವಲಂಬಿತರು ಹೊಂದಿರುವ ಆಸ್ತಿಯ ಸಂಪೂರ್ಣ ವಿವರ ನೀಡಬೇಕಾದ್ದು 1951ರ ಸುಪ್ರೀಂಕೋರ್ಟ್‌ನ ನಿಯಮವಾಗಿದೆ. ಆದರೆ, ಚಿಕ್ಕಬಳ್ಳಾಪುರದ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳು ತಮ್ಮ ಮತ್ತು ಪತ್ನಿಯರ ಆಸ್ತಿ ವಿವರಣೆಯನ್ನು ಮಾತ್ರ ಸಲ್ಲಿಸಿದ್ದಾರೆ. ಮಕ್ಕಳು ಮತ್ತು ಅವಲಂಬಿತರು ಹೊಂದಿರುವ ಆಸ್ತಿಯನ್ನು ಬಹಿರಂಗಪಡಿಸಿಲ್ಲ. ಈ ಮೂಲಕ ಮತದಾರರ ಹಾದಿತಪ್ಪಿಸಿದ್ದಾರೆ ಎಂದು ರೆಡ್ಡಿ ದೂರಿದ್ದಾರೆ.

## ಮಂಗಳೂರು, ಬಳ್ಳಾರಿಯಲ್ಲಿ ಏ.4ಕ್ಕೆ ರಾಹುಲ್ ರ್‍ಯಾಲಿ

**ಬೆಂಗಳೂರು:** ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಎರಡನೇ ಹಂತದ ಪ್ರಚಾರಕ್ಕಾಗಿ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಏ.4ರಂದು ಆಗಮಿಸಲಿದ್ದು, ಈ ಸಂದರ್ಭದಲ್ಲಿ ಅವರು ಮಂಗಳೂರು ಹಾಗೂ ಬಳ್ಳಾರಿಯಲ್ಲಿ ನಡೆಯುವ ಪ್ರಚಾರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಎರಡನೇ ಹಂತದ ಪ್ರಚಾರಕ್ಕಾಗಿ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಪ್ರಧಾನಮಂತ್ರಿ ಮನಮೋಹನ್‌ಸಿಂಗ್ ಅವರಿಗೂ ರಾಜ್ಯ ಕಾಂಗ್ರೆಸ್‌ನಿಂದ ಆಹ್ವಾನ ನೀಡಲಾಗಿದ್ದು, ಅವರಿನ್ನೂ ದಿನಾಂಕ ಖಚಿತ ಪಡಿಸಿಲ್ಲ. ವಾಸ್ತವವಾಗಿ ರಾಹುಲ್, ಸೋನಿಯಾ ಹಾಗೂ ಸಿಂಗ್ ಅವರಿಗೆ ತಲಾ ಎರಡು ದಿನ ರಾಜ್ಯ ಪ್ರವಾಸ ಕೈಗೊಳ್ಳುವಂತೆ ಕೋರಲಾಗಿತ್ತು. ಆದರೆ, ದೇಶಾದ್ಯಂತ ಪ್ರಚಾರ ನಡೆಸಬೇಕಾದ ಹಿನ್ನೆಲೆಯಲ್ಲಿ ತಲಾ ಒಂದು ದಿನ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ತಿಳಿಸಿವೆ. ರಾಜ್ಯ ನಾಯಕರ ಪೈಕಿ ಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರು ಮಾ. 24ರಿಂದಲೇ ರಾಜ್ಯಾದ್ಯಂತ ಪ್ರಚಾರ ಕೈಗೊಳ್ಳುತ್ತಿದ್ದು, ಇದು ಏ. 15 ರವರೆಗೂ ಮುಂದುವರೆಯಲಿದೆ. ಇವರಲ್ಲದೆ, ಹಿರಿಯ ನಾಯಕ ಎಸ್.ಎಂ.ಕೃಷ್ಣ ಯುಗಾದಿ ನಂತರ ಅಂದರೆ ಏ.2ರಿಂದ ಏ.14ರ ವರೆಗೂ ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲೂ ಸಂಚರಿಸಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಲಿದ್ದಾರೆ. ವಿಶೇಷವಾಗಿ ಬೆಂಗಳೂರಿನಲ್ಲಿ ಮೂರು ದಿನ ಹಾಗೂ ಮಂಡ್ಯದಲ್ಲಿ ಒಂದು ದಿನ ಅವರು ಪ್ರಚಾರ ನಡೆಸಲಿದ್ದಾರೆ. ಆದರೆ, ರಾಹುಲ್ ಪ್ರವಾಸದ ವಿವರ ನೀಡಲು ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿದ ಪ್ರಚಾರ ಸಮಿತಿ ಅಧ್ಯಕ್ಷ ವೀರಣ್ಣ ಮತ್ತಿಕಟ್ಟಿ, ರಾಹುಲ್ ಏ.5ಕ್ಕೆ ರಾಜ್ಯಕ್ಕೆ ಬರಲಿದ್ದಾರೆ ಎಂದು ತಪ್ಪು ಮಾಹಿತಿ ನೀಡಿದರು.

## ರಮ್ಯಾಗೆ ಆಶೀರ್ವಾದ, ಜೊತೆಗೆ 30000 ದೇಣಿಗೆ



**ಮದ್ದೂರಿನಲ್ಲಿ ಪ್ರಚಾರ ಕೈಗೊಂಡ ಸಂಸದೆ ರಮ್ಯಾ ಅವರಿಗೆ 5 ಸಾವಿರ ರೂ. ನೀಡಿದ ಮಹಿಳೆ.**

**ಮಂಡ್ಯ:** ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಮ್ಯಾಗೆ ಮದ್ದೂರು ತಾಲೂಕಿನ ಕೊತ್ತನಹಳ್ಳಿ ಗ್ರಾಮದ ಲಕ್ಷ್ಮಮ್ಮ ಎಂಬುವರು ಚುನಾವಣಾ ವೆಚ್ಚಕ್ಕಾಗಿ 5 ಸಾವಿರ ಹಾಗೂ ಕುದರಗುಂಡಿ ಗ್ರಾಮದ ಚಿಕ್ಕರಾಮಣ್ಣ ಎಂಬುವರು 25 ಸಾವಿರ ರೂ.ಗಳ ದೇಣಿಗೆ ನೀಡಿದ್ದಾರೆ. ರಮ್ಯಾ ಅವರು ಶುಕ್ರವಾರ ಮದ್ದೂರು ತಾಲೂಕಿನಲ್ಲಿ ಚುನಾವಣಾ ಪ್ರಚಾರ ಕೈಗೊಂಡಿದ್ದರು. ಕೊತ್ತನಹಳ್ಳಿಗೆ ಬಂದಾಗ ಗ್ರಾಮದ ಲಕ್ಷ್ಮಮ್ಮ ಎಂಬುವರು 5 ಸಾವಿರ ರೂ. ಹಣ ನೀಡಿ ಆಶೀರ್ವದಿಸಿದರು. ನಂತರ ಕುದರಗುಂಡಿ ಗ್ರಾಮಕ್ಕೆ ಬಂದಾಗ ಚಿಕ್ಕರಾಮಣ್ಣ ಎಂಬುವರು ಚುನಾವಣಾ ವೆಚ್ಚಕ್ಕಾಗಿ 25 ಸಾವಿರ ರೂ. ಹಣ ನೀಡಿದರು. ರಮ್ಯಾ ಅವರ ಕಾರ್ಯವೈಖರಿಯನ್ನು ಶ್ಲಾಘಿಸಿ, ಶುಭ ಕೋರಿದರು.

# ಜೆಡಿಎಸ್‌ನಲ್ಲಿ 10 ಆಮದು ಅಭ್ಯರ್ಥಿಗಳು

### ■ ಹಠಾತ್ತನೇ ಬಂದ್ರು, ದಿಢೀರನೇ ಕಣಕ್ಕಿಳಿದರು! ■ ಕೊನೇ ಕ್ಷಣದಲ್ಲಿ ಅಭ್ಯರ್ಥಿ ನಿಗದಿಪಡಿಸುವ ಸಂಕಟ

**ಬೆಂಗಳೂರು:** ಸಮರ್ಥ ಅಭ್ಯರ್ಥಿಗಳ ಕೊರತೆ ಹಿನ್ನೆಲೆಯಲ್ಲಿ ನಾಮಪತ್ರ ಸಲ್ಲಿಸುವ ಕೊನೇ ದಿನದವರೆಗೂ ತಲಾಷೆಯಲ್ಲಿದ್ದ ಜೆಡಿಎಸ್‌ನಿಂದ 10 ಕ್ಷೇತ್ರಗಳಲ್ಲಿ ಕಣಕ್ಕಿಳಿದಿರುವವರು 'ಆಮದು' ಅಭ್ಯರ್ಥಿಗಳು.



ಮೈಸೂರು, ಕೋಲಾರ, ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ದಕ್ಷಿಣ, ಬೆಂಗಳೂರು ಸೆಂಟ್ರಲ್, ಬಳ್ಳಾರಿ, ರಾಯಚೂರು, ವಿಜಾಪುರ, ಉಡುಪಿ-ಚಿಕ್ಕಮಗಳೂರು ಕ್ಷೇತ್ರಗಳಲ್ಲಿ ಇತರೆ ಪಕ್ಷಗಳಿಂದ ಬಂದು ಹಠಾತ್ತನೇ ಅಭ್ಯರ್ಥಿಗಳಿದ್ದಾರೆ.

ಮೈಸೂರು ಕ್ಷೇತ್ರಕ್ಕೆ ಸಿ.ಕೆ.ಜಾಫರ್ ಷರೀಫ್ ಅವರ ಸಮೇತ ಹಲವಾರು ಹೆಸರುಗಳು ಕೇಳಿ ಬಂದವಾದರೂ ಆಶ್ಚರ್ಯಕರ ಅಭ್ಯರ್ಥಿಯಾಗಿ ನಿವೃತ್ತ ಉಪ ಲೋಕಾಯುಕ್ತ ನ್ಯಾ.ಚಂದ್ರಶೇಖರಯ್ಯ ಅಭ್ಯರ್ಥಿಯಾದರು. ಅದೇ ರೀತಿ ವಿಜಾಪುರಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅಭ್ಯರ್ಥಿಯಾದರು. ದಾವಣಗೆರೆಯಲ್ಲಿ ಕಾಂಗ್ರೆಸ್ ಟಿಕೆಟ್ ವಂಚಿತ ಮಹಿಮಾ ಪಟೇಲ್ ಅವರನ್ನು ಸೆಳೆದು ಟಿಕೆಟ್ ನೀಡಲಾಯಿತು. ಚಿತ್ರದುರ್ಗದಲ್ಲಿ ಸಮಾಜವಾದಿ ಪಕ್ಷದಲ್ಲಿದ್ದ ಗೂಳಿಹಟ್ಟಿ ಶೇಖರ್ ಅವರಿಗೆ ಗಾಳ ಹಾಕಿ ಕಣಕ್ಕಿಳಿಸಲಾಯಿತು.

ಕೋಲಾರದಲ್ಲಿ ಅಂತಿಮ ಕ್ಷಣದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಕೇಶವ ಅಭ್ಯರ್ಥಿಯಾದರೆ ರಾಯಚೂರಿನಲ್ಲಿ ಟಿಕೆಟ್ ಪಡೆದ ಅಭ್ಯರ್ಥಿ ಸ್ಪರ್ಧೆಗೆ ಹಿಂದೇಟು ಹಾಕಿದ್ದರಿಂದ ನಿವೃತ್ತ ಐಎಎಸ್ ಅಧಿಕಾರಿ ದೇವೇಂದ್ರಪ್ಪ ಭೀಮಪ್ಪನಾಯಕ್ ಅಭ್ಯರ್ಥಿಯಾಗುವಂತಾಯಿತು.

ಉಡುಪಿ-ಚಿಕ್ಕಮಗಳೂರಿಗೆ ಕೆಜೆಪಿಯಿಂದ ವಲಸೆ ಬಂದ ಧನಂಜಯಕುಮಾರ್ ಅಭ್ಯರ್ಥಿಯಾದರೆ, ಬೆಂಗಳೂರು ಸೆಂಟ್ರಲ್‌ನಿಂದ ಮಾಜಿ ಸಚಿವ ಜೀವರಾಜ್ ಆಳ್ವಾ ಹಾಗೂ ಸಾಮಾಜಿಕ ಕಾರ್ಯಕರ್ತೆ ರುತ್ ಮನೋರಮಾ ಅಂತಿಮ ಹಂತದಲ್ಲಿ ಅಭ್ಯರ್ಥಿಗಳಾದರು.

ಜೆಡಿಎಸ್‌ನಿಂದ ಬಿ ಫಾರಂ ಪಡೆದ ಸ್ಪರ್ಧಿಸಿರುವ ಐವರು ಪಕ್ಷದ ಪ್ರಾಥಮಿಕ ಸದಸ್ಯತ್ವವನ್ನೂ ಪಡೆದಿರಲಿಲ್ಲ. ಟಿಕೆಟ್ ಪಡೆದ ನಂತರ ಸದಸ್ಯತ್ವ ನೀಡಲಾಯಿತು ಎಂದು ಹೇಳಲಾಗಿದೆ.

ಶಿವಮೊಗ್ಗದಿಂದ ಸ್ಪರ್ಧೆಗಿಳಿದಿರುವ ಗೀತಾ ಶಿವರಾಜ್‌ಕುಮಾರ್ ಸಹ ಹೊಸದಾಗಿ ಪಕ್ಷಕ್ಕೆ ಬಂದವರೆ. ಆದರೆ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸಹೋದರ ಮಧು ಬಂಗಾರಪ್ಪ ಪರ ಪ್ರಚಾರ ಮಾಡಿದ್ದರಿಂದ ಜೆಡಿಎಸ್ ಪಕ್ಷದ ಜತೆ ಗುರುತಿಸಿಕೊಂಡಂತಾಗಿತ್ತು.



**ಸಿದ್ದರಾಮಯ್ಯ ಸಂಪುಟದಲ್ಲಿರುವ ಸಚಿವರೊಬ್ಬರು (ಡಿಕೆಶಿ) ಅಹಂಕಾರದ ಮಾತುಗಳನ್ನು ಹೇಳುತ್ತಿದ್ದಾರೆ. ಅವರ ಬಂಡವಾಳ ಏನು ಎಂಬುದು ಗೊತ್ತಿದೆ. ಬಳ್ಳಾರಿಯ ಗಣಿ ಹಗರಣಕ್ಕಿಂತ ಎರಡು ಮೂರು ಪಟ್ಟು ದೊಡ್ಡ ಹಗರಣ ಇವರದು. ಆ ಬಗ್ಗೆ ಸಿಬಿಐ ತನಿಖೆ ನಡೆಯಲಿ. ತನಿಖೆಗೆ ವಹಿಸುವ ಧೈರ್ಯ ಸರ್ಕಾರಕ್ಕೆ ಇದೆಯೇ?**
**● ಎಚ್.ಡಿ.ದೇವೇಗೌಡ, ಜೆಡಿಎಸ್ ವರಿಷ್ಠ**

## ಕೊಪ್ಪಳದಲ್ಲಿ ಕಾಂಗ್ರೆಸ್‌ಗೆ ಬೆಂಬಲವಿಲ್ಲ

**ಅನ್ಸಾರಿ ಹೇಳಿಕೆಗೆ ದೇವೇಗೌಡ ಆನ್ಸರ್**

**ಬೆಂಗಳೂರು:** ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಅಥವಾ ಬಿಜೆಪಿ ಬೆಂಬಲ ಕೊಡುವುದಿಲ್ಲ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಸ್ಪಷ್ಟಪಡಿಸಿದ್ದು, ಕಾಂಗ್ರೆಸ್‌ಗೆ ಬಾಹ್ಯ ಬೆಂಬಲ ನೀಡಲು ಸಮ್ಮತಿ ನೀಡಿಲ್ಲ ಎಂದು ತಿಳಿಸಿದ್ದಾರೆ.

'ಕೊಪ್ಪಳದಲ್ಲಿ ಜೆಡಿಎಸ್ ಅಭ್ಯರ್ಥಿ ಇಲ್ಲದ ಕಾರಣ ಕಾಂಗ್ರೆಸ್ಸನ್ನು ಬೆಂಬಲಿಸಲಿದ್ದೇವೆ' ಎಂದು ಇತ್ತೀಚೆಗೆ ಗಂಗಾವತಿಯ ಜೆಡಿಎಸ್ ಶಾಸಕ ಇಕ್ಬಾಲ ಅನ್ಸಾರಿ ನೀಡಿದ ಹೇಳಿಕೆಯಿಂದ ಗೊಂದಲ ಸೃಷ್ಟಿಯಾದ ಹಿನ್ನೆಲೆಯಲ್ಲಿ ಗೌಡರು ಈ ಸ್ಪಷ್ಟನೆ ನೀಡಿದ್ದಾರೆ.

ಕೇಂದ್ರದಲ್ಲಿ ಎರಡು ರಾಷ್ಟ್ರೀಯ ಪಕ್ಷಗಳಿಗೆ ಪರ್ಯಾಯವಾಗಿ ಮೂರನೇ ಶಕ್ತಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವ ನಾವು ಕಾಂಗ್ರೆಸ್ ಮತ್ತು ಬಿಜೆಪಿಗೆ ಬೆಂಬಲ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದೂ ಅವರು ಹೇಳಿದ್ದಾರೆ.

ಶುಕ್ರವಾರ ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೊಪ್ಪಳದಲ್ಲಿ ಕೆಲವು ಗೊಂದಲಗಳಿಂದಾಗಿ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಆಗಲಿಲ್ಲ. ಆದರೆ, ಅಲ್ಲಿ ಯಾರಿಗೆ ಬೆಂಬಲ ನೀಡಬೇಕು ಎಂಬುದನ್ನು ಪಕ್ಷದ ಮುಖಂಡ ಜಮೀರ್ ಅಹಮದ್ ಕೊಪ್ಪಳಕ್ಕೆ ಭೇಟಿ ನೀಡಿ ಅಲ್ಲಿನ ಮುಖಂಡರ ಜತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ಯುಗಾದಿ ನಂತರ ರಾಜ್ಯಪ್ರವಾಸ ಆರಂಭಿಸಿ 26 ಕ್ಷೇತ್ರಗಳಲ್ಲೂ ಪ್ರಚಾರ ಮಾಡಲಾಗುವುದು ಎಂದೂ ಅವರು ತಿಳಿಸಿದರು.

## ಮೋದಿ ಸಾಧನೆ ಬಿಂಬಿಸಲು ಡಿಜಿಟಲ್ ಗಾಡಿ

### ■ ರಾಜ್ಯದ ಎಲ್ಲಾ 28 ಕ್ಷೇತ್ರದಲ್ಲಿ ಒಂದೊಂದು ವಾಹನ ಸಂಚಾರ

**ಬೆಂಗಳೂರು:** ಬಿಜೆಪಿ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಕುರಿತು ಸಾಕ್ಷ್ಯಚಿತ್ರ ಇರುವ ಡಿಜಿಟಲ್ ಪ್ರಚಾರದ ವಾಹನಗಳಿಗೆ ರಾಜ್ಯ ಬಿಜೆಪಿ ಚಾಲನೆ ನೀಡಿದೆ.

ಬೆಂಗಳೂರಿನಲ್ಲಿ ಶುಕ್ರವಾರ ನಾಲ್ಕು ವಾಹನಗಳನ್ನು ಬಿಡುಗಡೆ ಮಾಡಲಾಗಿದ್ದು, ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ 28 ಎಲ್‌ಇಡಿ ಪ್ರಚಾರದ ವಾಹನಗಳು ಸಂಚರಿಸಲಿವೆ. ನರೇಂದ್ರ ಮೋದಿ ಕುರಿತ ಸಾಕ್ಷ್ಯಚಿತ್ರದ ಜತೆಗೆ ಗುಜರಾತ್ ಅಭಿವೃದ್ಧಿ ಬಗ್ಗೆಯೂ ಡಿಜಿಟಲ್ ಚಿತ್ರಯಾತ್ರೆ ಮೂಲಕ ಬಿಜೆಪಿ ಪ್ರಚಾರ ಮಾಡಲಿದೆ.

ಈ ಸಂದರ್ಭದಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಅನಂತ್ ಕುಮಾರ್, ಬೆಂಗಳೂರು ಉತ್ತರ ಕ್ಷೇತ್ರದ ಅಭ್ಯರ್ಥಿ ಡಿ.ವಿ.ಸದಾನಂದಗೌಡ, ಮಾಜಿ ಸಚಿವ ವಿ.ಸೋಮಣ್ಣ, ವಿಧಾನಪರಿಷತ್ ಸದಸ್ಯರಾದ ಅಶ್ವಥ್ ನಾರಾಯಣ, ವೈ.ಎ.ನಾರಾಯಣ ಸ್ವಾಮಿ ಸೇರಿದಂತೆ ಪಕ್ಷದ ಇತರೆ ನಾಯಕರು ಉಪಸ್ಥಿತರಿದ್ದರು.

ಪರಿಣಾಮಕಾರಿಯಾಗಿ ತನ್ನ ವಿಚಾರಗಳನ್ನು ಮತ್ತು ನರೇಂದ್ರ ಮೋದಿ ನೇತೃತ್ವದ ಭಾರತ ಅಭಿವೃದ್ಧಿಯನ್ನು ಬಿಂಬಿಸಲು ಬಿಜೆಪಿಯು ಎಲ್‌ಇಡಿ ವ್ಯಾನ್‌ಗಳನ್ನು ಬಳಸುತ್ತಿದೆ. ಈ ವಾಹನಗಳು ರಾಜ್ಯದ ಎಲ್ಲಾ 28 ಲೋಕಸಭಾ ಕ್ಷೇತ್ರಗಳಿಗೆ ಒಂದರಂತೆ ಸಂಚರಿಸಲಿವೆ ಎಂದು ಬಿಜೆಪಿ ಪ್ರಕಟಣೆಯಲ್ಲಿ ತಿಳಿಸಿದೆ.

**ಡಿಜಿಟಲ್ ವಾಹನದಲ್ಲಿ ಏನಿದೆ?:** ಡಿಜಿಟಲ್ ವಾಹನದ ಎಲ್‌ಇಡಿ ಪರದೆಯು 15 X 7 ಅಡಿ ವಿಸ್ತೀರ್ಣ ಹೊಂದಿದೆ. ನರೇಂದ್ರ ಮೋದಿ ಅವರ ಕುರಿತ ಸಾಕ್ಷ್ಯಚಿತ್ರ, ಗುಜರಾತಿನಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯ, ಯುಪಿಎ ಸರ್ಕಾರದ ವೈಫಲ್ಯಗಳು ಮತ್ತು ಕಳೆದ 10 ವರ್ಷಗಳಲ್ಲಿ ನಡೆಸಿರುವ ಹಗರಣಗಳನ್ನೊಳಗೊಂಡ ವಿಡಿಯೋ ಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಅಲ್ಲದೆ, ರಾಜ್ಯ ಬಿಜೆಪಿ ಘಟಕ ತಯಾರು ಮಾಡಿರುವ ಒಂದು ನಿಮಿಷದ 10 ವಿಡಿಯೋಗಳನ್ನು ಪ್ರದರ್ಶಿಸಲಾಗುವುದು. ಶುಕ್ರವಾರದಿಂದ ಆರಂಭವಾಗಿರುವ ನರೇಂದ್ರ ಮೋದಿ ಚಿತ್ರಯಾತ್ರೆಯು 20 ದಿನಗಳ ಕಾಲ ರಾಜ್ಯಾದ್ಯಂತ ಸಂಚರಿಸಲಿದೆ.



ಎಲ್‌ಇಡಿ ಪ್ರಚಾರಕ್ಕೆ ಬೆಂಗಳೂರಿನಲ್ಲಿ ಬಿಜೆಪಿ ನಾಯಕರಿಂದ ಚಾಲನೆ

### ನಾಳೆ ಬೆಳಗಾವಿಗೆ ನರೇಂದ್ರ ಮೋದಿ

**ಬೆಳಗಾವಿ:** ಬಿಜೆಪಿಯ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಮಾ.30ರಂದು ಬೆಳಗಾವಿಗೆ ಆಗಮಿಸಲಿದ್ದು, ಇಲ್ಲಿಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುರೇಶ ಅಂಗಡಿ ಪರ ಬಹಿರಂಗ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮಾಜಿ ಶಾಸಕ ಅಭಯ ಪಾಟೀಲ, ನಗರದ ಸಿಪಿಎಡ್ ಮೈದಾನದಲ್ಲಿ ಸಂಜೆ 4 ಗಂಟೆಗೆ ಕಾರ್ಯಕ್ರಮ ನಡೆಯಲಿದೆ ಎಂದರು.

## ಮಂಡ್ಯದಲ್ಲಿ ಈಗಲೂ ಅಂಬಿ V/S ಎಸ್ಸೆಂ ಕೃಷ್ಣ

**ಬೆಂಗಳೂರು:** ಮಂಡ್ಯ ಜಿಲ್ಲೆಯ ಬಣ ರಾಜಕಾ ಇರಣದಿಂದ ಉದ್ಭವವಾಗಿರುವ ಪ್ರಕೋಪ ಪರಿಸ್ಥಿತಿಯ ಉಪಶಮನಕ್ಕೆ ಎರಡು ಪರಿಹಾರೋಪಾಯ ಕಂಡುಕೊಳ್ಳಲಾಗಿದೆ.

**ಅವು-**

1 ಜಿಲ್ಲಾಧ್ಯಕ್ಷರ ಜತೆಗೆ ಕಾರ್ಯಾಧ್ಯಕ್ಷ (ಅಥವಾ ಉಸ್ತುವಾರಿ ಅಧ್ಯಕ್ಷ) ಹುದ್ದೆಯನ್ನು ಸೃಷ್ಟಿಸುವುದು.

2 ಎಸ್ಸೆಂ ಕೃಷ್ಣ ಹಾಗೂ ಅಂಬರೀಶ್ ಬಣಗಳ ತಲಾ 10 ಮಂದಿ ಸದಸ್ಯರಿರುವ ಕಾಂಗ್ರೆಸ್ ಮಂಡ್ಯ ಜಿಲ್ಲಾ ಪ್ರಚಾರ ಸಮಿತಿಯೊಂದನ್ನು ಅಸ್ತಿತ್ವಕ್ಕೆ ತರುವುದು.

ಜಿಲ್ಲಾ ಕಾಂಗ್ರೆಸ್‌ಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಳ್ಳುವಾಗ ಹಾಲಿ ಅಧ್ಯಕ್ಷ ಹಾಗೂ ಕಾರ್ಯಾಧ್ಯಕ್ಷರಿಗೆ ಸಮಾನ ಅಧಿಕಾರ ದೊರಕಲಿದೆ. ಈ ಕಾರ್ಯಾಧ್ಯಕ್ಷ ಹುದ್ದೆಗೆ ಮಂಡ್ಯದ ವಕೀಲ ಪಿ.ಎಂ.ಸೋಮಶೇಖರ್ ಅವರ ಹೆಸರನ್ನು ಪ್ರಸ್ತಾಪಿಸಲಾಗಿದ್ದು, ಇದಕ್ಕೆ ಎರಡು ಬಣಗಳ ಒಪ್ಪಿಗೆ ದೊರಕಿದೆ ಎಂದು ಮೂಲಗಳು ತಿಳಿಸಿವೆ.

ಈ ಬಗ್ಗೆ ತಮ್ಮ ಬಣದ ನಾಯಕರಿಗೆ ಮನವರಿಕೆ ಮಾಡಿಕೊಡಲು ಹಾಗೂ ಚುನಾವಣೆ ಮುಗಿಯುವವರೆಗೂ ಯಾವುದೇ ಕಾರಣಕ್ಕೂ ಬಣ ಸಂಘರ್ಷಕ್ಕೆ ಆಸ್ಪದ ನೀಡದಂತೆ ಸೂಚನೆ ನೀಡಲು ಎಸ್ಸೆಂ ಕೃಷ್ಣ ಅವರು ತಮ್ಮ ಸದಾಶಿವನಗರದ ನಿವಾಸದಲ್ಲಿ ಶುಕ್ರವಾರ ಸಭೆಯನ್ನು ನಡೆಸಿದರು. ಈ ಸಭೆಯಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಆತ್ಮಾನಂದ, ಟಿ.ಎಸ್. ಸತ್ಯಾನಂದ ಹಾಗೂ ರವೀಂದ್ರ ಶ್ರೀಕಂಠಯ್ಯ ಸೇರಿದಂತೆ ಮಂಡ್ಯ ಬಣದ ಪ್ರಮುಖರು ಪಾಲ್ಗೊಂಡಿದ್ದರು.





### 'ನಾಳೆ ಅಂಬಿ ಬರುತ್ತಾರೆ'

**ಮದ್ದೂರು:** ಅನಾರೋಗ್ಯ ನಿಮಿತ್ತ ಸಿಂಗಾಪುರದಲ್ಲಿ ಚಿಕಿತ್ಸೆ ಪಡೆದು ಮಲೇಷ್ಯಾದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್, ಮಾ.30ರಂದು ಭಾರತಕ್ಕೆ ಆಗಮಿಸುತ್ತಿದ್ದಾರೆ. ಸಚಿವ ಎಚ್.ಸಿ. ಮಹದೇವಪ್ಪ ಅವರಿಗೆ ಈ ಕುರಿತು ದೂರವಾಣಿ ಮೂಲಕ ಮಾಹಿತಿ ನೀಡಿದ್ದಾರೆ ಎಂದು ಮಂಡ್ಯ ಸಂಸದೆ ರಮ್ಯಾ ತಿಳಿಸಿದ್ದಾರೆ.

## ಪೂಜಾರಿ ವಿರುದ್ಧ ನೀತಿ ಸಂಹಿತೆ ಉಲ್ಲಂಘನೆ ಕೇಸು

**ಮಂಗಳೂರು:** ಆಸ್ತಿ ತೆರಿಗೆಯನ್ನು ಜಾಸ್ತಿ ಮಾಡುವುದಿಲ್ಲ, ತೆರಿಗೆ ಏರಿಸಲು ಪೂಜಾರಿ ಬಿಡುವುದಿಲ್ಲ ಎಂದು ಜನರಿಗೆ ನಾವು ಭರವಸೆ ಕೊಡುತ್ತಿದ್ದೇವೆ ಎಂದು ಜನಾರ್ದನ ಪೂಜಾರಿ ನೀಡಿದ ಹೇಳಿಕೆ ಮೇಲ್ನೋಟಕ್ಕೆ ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಆಗಿರುತ್ತದೆ ಎಂದು ಮಂಗಳೂರು ದಕ್ಷಿಣ ಕ್ಷೇತ್ರದ ಸೆಕ್ಟರ್ ಮ್ಯಾಜಿಸ್ಟ್ರೇಟ್ ಜಿ.ವಿ. ರಾಜಶೇಖರ್ ಸಲ್ಲಿಸಿದ ದೂರಿನ ಮೇರೆಗೆ ಪೂಜಾರಿ ಅವರ ಮೇಲೆ ಬಂದರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆಟೋದಲ್ಲಿ 3 ಲಕ್ಷ ಅಕ್ರಮ ಹಣ ವಶ

**ಮಂಗಳೂರು:** ಲೋಕಸಭಾ ಚುನಾವಣೆ ಪ್ರಯುಕ್ತ ತಲಪಾಡಿ ಚೆಕ್‌ಪೋಸ್ಟ್‌ನಲ್ಲಿ ವಾಹನಗಳ ತಪಾಸಣೆ ಮಾಡುತ್ತಿದ್ದಾಗ ಕೇರಳ ನೋಂದಣಿಯ ಆಟೋದಲ್ಲಿ 3.04 ಲಕ್ಷ ರೂ. ನಗದು ಪತ್ತೆಯಾಗಿದೆ. ಕಾಸರಗೋಡಿನಿಂದ ಮಂಗಳೂರಿನ ಕಡೆಗೆ ಬರುತ್ತಿದ್ದ ಆಟೋದಲ್ಲಿ ಹಣ ಪತ್ತೆಯಾಯಿತು. ಪ್ರಕರಣವನ್ನು ಹೆಚ್ಚಿನ ಪರಿಶೀಲನೆಗಾಗಿ ಆದಾಯ ತೆರಿಗೆ ಇಲಾಖೆಗೆ ಹಸ್ತಾಂತರಿಸಲಾಗಿದೆ.

**ಧಾರವಾಡದಲ್ಲಿ ದಾಖಲೆಯಿಲ್ಲದ ಹಣ ವಶ:** ಕಾರಿನಲ್ಲಿ ಸಾಗಿಸುತ್ತಿದ್ದ ಸೂಕ್ತ ದಾಖಲೆ ಇಲ್ಲದ 1.75 ಲಕ್ಷ ರೂ. ವಿಚಕ್ಷಣಾ ದಳದವರು ನವಲಗುಂದದ ರೋಣ ಕ್ರಾಸ್ ಬಳಿ ವಶಪಡಿಸಿಕೊಂಡಿದ್ದಾರೆ. ಶಿವಪುತ್ರಪ್ಪ ಬಿರಾದಾರ ಮತ್ತು ಚೇತನ ಎಂ.ಬಿರಾದಾರ ಎಂಬುವರು 1.75 ಲಕ್ಷ ರೂ. ಸಮೇತ ವಿಜಾಪುರದಿಂದ ಹುಬ್ಬಳ್ಳಿಗೆ ಆಗಮಿಸುತ್ತಿದ್ದರು. ಈ ವೇಳೆ ನವಲಗುಂದ ಚೆಕ್ ಪೋಸ್ಟ್‌ನಲ್ಲಿ ಕಾರು ತಪಾಸಣೆಗೆ ಒಳಪಡಿಸಿದಾಗ ದಾಖಲೆ ಇಲ್ಲದ ಹಣ ಪತ್ತೆಯಾಗಿದೆ. ಕಾರು ಜಪ್ತಿ ಮಾಡಿಕೊಂಡು ಇಬ್ಬರನ್ನು ಬಂಧಿಸಲಾಗಿದ್ದು, ನವಲಗುಂದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರಾಜಕೀಯ ಪಕ್ಷಗಳಿಗೆ ಕಬ್ಬು ರೈತರ 18 ಷರತ್ತು

**ಬೆಂಗಳೂರು:** ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸಿನಂತೆ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸುವುದೂ ಸೇರಿದಂತೆ 18 ಬೇಡಿಕೆಗಳನ್ನು (ರೈತರ ಪ್ರಣಾಳಿಕೆ) ರಾಜಕೀಯ ಪಕ್ಷಗಳ ಮುಂದಿಟ್ಟಿರುವ ರಾಜ್ಯ ಕಬ್ಬು ಬೆಳೆಗಾರರ ಸಂಘ, ಈ ಬೇಡಿಕೆಗಳ ಈಡೇರಿಕೆಗೆ ಒಪ್ಪಿ ಬದ್ಧತೆ ತೋರುವ ಪಕ್ಷ ಹಾಗೂ ಅಭ್ಯರ್ಥಿಗಳಿಗೆ ಬೆಂಬಲ ನೀಡುವುದಾಗಿ ಪ್ರಕಟಿಸಿದೆ. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸಿನಂತೆ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ, ಕನಿಷ್ಠ ಆದಾಯ ಭದ್ರತೆ ಕಾಯ್ದೆ ಜಾರಿ, ಕೇಂದ್ರ ಕೃಷಿ ಬೆಲೆ ನಿಗದಿ ಆಯೋಗಕ್ಕೆ ಸಂಪೂರ್ಣ ಸ್ವಾಯತ್ತತೆ ನೀಡುವುದು ಸೇರಿದಂತೆ 18 ಬೇಡಿಕೆಗಳನ್ನು ಪ್ರಕಟಿಸಿದರು.

## ಬೇಕಾದ್ದು ಕೊಡಿ

■ ಎಡಿಆರ್-ದಕ್ಷ್ ಜಂಟಿ ಸಮೀಕ್ಷೆಯಲ್ಲಿ ಕುತೂಹಲಕರ ಸಂಗತಿ ಬಹಿರಂಗ ■ ಪ್ರತಿ ಕ್ಷೇತ್ರದ 500 ಮತದಾರರ ಅಭಿಪ್ರಾಯ ಸಂಗ್ರಹ

# ಮತದಾರರ ಅಗತ್ಯವೇ ಬೇರೆ, ಅಭ್ಯರ್ಥಿಗಳ ಭರವಸೆಗಳೇ ಬೇರೆ!

■ ವಿಶೇಷ ವರದಿ

**ಬೆಂಗಳೂರು:** ಮತದಾರ ಪ್ರಭು ನೀರು, ರಸ್ತೆಯಂತಹ ಕನಿಷ್ಠ ಮೂಲ ಸೌಕರ್ಯಗಳನ್ನು ಕೇಳಿದರೆ, ಹೇಗಾದರೂ ಗೆಲ್ಲಲೇಬೇಕೆಂಬ ಉಮೇದಿನಲ್ಲಿರುವ ಅಭ್ಯರ್ಥಿಗಳು ' ಅಂಗೈಯಲ್ಲೇ ಅರಮನೆ' ತೋರಿಸಿ ಮತದಾರನ ಮನಗೆಲ್ಲುವ ಪ್ರಯತ್ನ ನಡೆಸಿದ್ದಾರೆ.

ಪಕ್ಷಗಳು ಹಾಗೂ ಅವುಗಳ ಅಭ್ಯರ್ಥಿಗಳು ತಾವು ಅಧಿಕಾರಕ್ಕೆ ಬಂದರೆ ಗುಜರಾತ್ ಮಾದರಿ ಆಡಳಿತ, ವಿದೇಶದಲ್ಲಿರುವ ಕಪ್ಪುಹಣ ವಾಪಾಸ್ ತರುವುದು, ಪೆಟ್ರೋಲ್-ಡೀಸೆಲ್ ಬೆಲೆ ಇಳಿಕೆ, ಅಲ್ಪಸಂಖ್ಯಾತರಿಗೆ ಆದ್ಯತೆಯಂತಹ ಭರವಸೆಗಳ ಮಹಾಪೂರ ಹರಿಸುತ್ತಿದ್ದಾರೆ. ಆದರೆ, ಮತದಾರರ ಆದ್ಯತೆಗಳ ಪಟ್ಟಿಯಲ್ಲಿ ಇವುಗಳಿಗೆ ಸ್ಥಾನವೇ ಇಲ್ಲ! ಆದರೆ, ವಾಸ್ತವವಾಗಿ ಮತದಾರರ ಆದ್ಯತೆಗಳು ಬೇರೆಯೇ ಆಗಿವೆ.

ಪ್ರಜಾಪ್ರಭುತ್ವ ಹಕ್ಕುಗಳ ಸಂಸ್ಥೆ (ಎಡಿಆರ್) ಹಾಗೂ ದಕ್ಷ್ ಸಂಸ್ಥೆ ಜಂಟಿಯಾಗಿ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಒಂದೂವರೆ ತಿಂಗಳು ನಡೆಸಿದ ಸಮೀಕ್ಷಾ ವರದಿಯಲ್ಲಿ ಈ ಅಂಶ ಬೆಳಕಿಗೆ ಬಂದಿದೆ. ಪ್ರತಿ ಕ್ಷೇತ್ರದಲ್ಲಿ 10 ಸ್ಥಳಗಳಂತೆ ಒಟ್ಟು 280 ಸ್ಥಳಗಳಲ್ಲಿ ತಲಾ 500 ಮತದಾರರ ಅಭಿಪ್ರಾಯಗಳನ್ನು ಸಂಗ್ರಹಿಸಿ ತಯಾರಿಸಲಾದ ಸಮೀಕ್ಷಾ ವರದಿಯಲ್ಲಿ ಪ್ರತಿ ನಾಲ್ವರಲ್ಲಿ ಓರ್ವ ಮಹಿಳೆ ಕೂಡ ಇದ್ದಾಳೆ.

**ಮತದಾರರಿಗೆ ಇವು ಬೇಕು:** ತಮ್ಮ ಕ್ಷೇತ್ರಗಳಲ್ಲಿ ಆದ್ಯತೆ ಮೇರೆಗೆ ಆಗಬೇಕಾದ ಕೆಲಸಗಳು ಯಾವುವು? ಎಂಬುದರ ಒಟ್ಟು 30 ಅಂಶಗಳನ್ನು ಮತದಾರರ ಮುಂದಿಡಲಾಗಿತ್ತು. ಅವುಗಳಲ್ಲಿ ಮತದಾರರು ಹೆಚ್ಚಾಗಿ ಆಯ್ಕೆ ಮಾಡಿರುವುದು ನಂಬಿಕಸ್ಥ ಸಂಸದರು, ನೀರು, ಕೃಷಿ ವಲಯಕ್ಕೆ ಸಮರ್ಪಕ ವಿದ್ಯುತ್ ಹಾಗೂ ಸಕಾಲದಲ್ಲಿ ಕೃಷಿ ಸಾಲ ದೊರೆಯಬೇಕು ಎಂದು ಹೇಳಿದ್ದಾರೆ.

**ಮತದಾರರ ಆದ್ಯತೆಗಳು**

- ■ ನಂಬಿಕಸ್ತ ಸಂಸದ ಬೇಕು
- ■ ಮಹಿಳೆಯರಿಗೆ ರಕ್ಷಣೆ ಕೊಡಿ
- ■ ಶುದ್ಧ ಕುಡಿವ ನೀರು ಪೂರೈಕೆ
- ■ ಉತ್ತಮ ರಸ್ತೆ
- ■ ಕೃಷಿ ವಲಯಕ್ಕೆ ಸಮರ್ಪಕ ವಿದ್ಯುತ್
- ■ ಸಕಾಲದಲ್ಲಿ ಕೃಷಿ ಸಾಲ

**ಅಭ್ಯರ್ಥಿಗಳ ಭರವಸೆಗಳು**

- ■ ಗುಜರಾತ್ ಮಾದರಿ ಆಡಳಿತ
- ■ ವಿದೇಶದಲ್ಲಿರುವ ಕಪ್ಪುಹಣ ವಾಪಸ್ ತರುವುದು
- ■ ಪೆಟ್ರೋಲ್-ಡೀಸೆಲ್ ಬೆಲೆ ಇಳಿಕೆ ಮಾಡುವುದು
- ■ ಅಲ್ಪಸಂಖ್ಯಾತರಿಗೆ ಆದ್ಯತೆ

ಆದರಲ್ಲೂ ಗ್ರಾಮಾಂತರ ಸೇರಿದಂತೆ ಬೆಂಗಳೂರಿನ ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲಿ ವಿಶ್ವಾಸಾರ್ಹ ಸಂಸದ, ಕುಡಿಯುವ ನೀರು ಮತ್ತು ಉತ್ತಮ ರಸ್ತೆ ಒದಗಿಸುವ ಹಾಗೂ ಸರ್ಕಾರಿ ಭೂಮಿ ಮತ್ತು ಕೆರೆ ಒತ್ತುವರಿ ತೆರವುಗೊಳಿಸುವಂತಹ ಭ್ರಷ್ಟಾಚಾರ ಮುಕ್ತವಾದ ಸಂಸದರು ಬೇಕು ಎಂದು ತಿಳಿಸಿದ್ದಾರೆ. ಗಣಿಗಾರಿಕೆ ನಿಷೇದದಿಂದ ನಿರುದ್ಯೋಗಿಗಳಾಗಿರುವ ಬಳ್ಳಾರಿ ಜನರಿಗೆ ಉದ್ಯೋಗಾವಕಾಶ ಮೊದಲ ಆದ್ಯತೆ ಆಗಿದೆ. ಆರೋಗ್ಯ ಸೇವೆ, ವಿದ್ಯುತ್ ಮತ್ತು ರಸ್ತೆ, ಪರಿಸರಕ್ಕೆ ಸಂಬಂಧಿಸಿದ ವಿಷಯಗಳು ನಂತರದ ಬೇಡಿಕೆಗಳಾಗಿವೆ. ಇನ್ನು ಉಡುಪಿ-ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡದಲ್ಲಿ ಮಹಿಳೆಯರಿಗೆ ರಕ್ಷಣೆ, ಉತ್ತರ ಕಾನೂನು ಮತ್ತು ಸುವ್ಯವಸ್ಥೆ, ಮಹಿಳೆಯರ ಸ್ವಾವಲಂಬನೆ ಆಗಬೇಕು ಎಂದು ಜನ ಬಯಸಿದ್ದಾರೆ. ಉತ್ತಮ ರಸ್ತೆ, ಶಾಲೆಗಳೂ ಇದರಲ್ಲಿ ಸೇರಿಕೊಂಡಿವೆ. ಪ್ರತಿ ವರ್ಷ ಬರದ ಪಟ್ಟಿಗೆ ಸೇರುವ ಚಿತ್ರದುರ್ಗಕ್ಕೆ ಕುಡಿಯುವ ನೀರು, ಆಹಾರ ಸಬ್ಸಿಡಿ ನೀಡಬೇಕಿದೆ. ಚಾಮರಾಜನಗರದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಆಗಬೇಕು ಎನ್ನುವುದು ಪ್ರಮುಖ ಬೇಡಿಕೆಯಾಗಿದೆ.

ರಾಯಚೂರು, ಹಾಸನ, ಶಿವಮೊಗ್ಗ, ಕೋಲಾರ, ಉತ್ತರ ಕನ್ನಡದಲ್ಲಿ ಮೊದಲ ಬೇಡಿಕೆ ಕೃಷಿಸಾಲ ಸೌಲಭ್ಯವಾಗಿದೆ. ಉಳಿದ ಬಹುತೇಕ ಕ್ಷೇತ್ರಗಳಲ್ಲಿ ಜನರ ಆದ್ಯತೆಗಳು ಹೆಚ್ಚಾಗಿ ಗುಣಮಟ್ಟದ ನಿರಂತರ ವಿದ್ಯುತ್, ಉತ್ತಮ ರಸ್ತೆಗಳು ಬೇಕು ಎಂದು ಬಯಸಿದ್ದಾರೆ. ಸಂಸದರಾದವರು ಜನರ ಕೈಗೆ ಸಿಗುವಂತಿರಬೇಕು ಎಂದೂ ಕೆಲ ಕ್ಷೇತ್ರಗಳಲ್ಲಿ ಮತದಾರರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಮೀಕ್ಷೆಯಲ್ಲಿ ಮತದಾನದ ಹಕ್ಕು ಹೊಂದಿದ್ದೀರಾ? ಕಳೆದ ಬಾರಿ ವೋಟು ಹಾಕಿದ್ದೀರಾ? ನೀವು ವೋಟು ಹಾಕಿದ ಅಭ್ಯರ್ಥಿ ಗೆದ್ದಿದ್ದಾರಾ? ಎಂಬ ಹಲವು ಪ್ರಶ್ನೆಗಳನ್ನೂ ಕೇಳಲಾಗಿತ್ತು. ಅವುಗಳಲ್ಲಿ ಬಹುತೇಕರು ಮತದಾನ ಹಕ್ಕಿನಿಂದ ವಂಚಿತರಾದವರು ಹಾಗೂ ಗೊಂದಲಗಳಿಂದಾಗಿ ಮತದಾನ ವಂಚಿತರು ಹೆಚ್ಚಾಗಿ ಕಂಡುಬಂದರು ಎಂದು ದಕ್ಷ್ ಸಂಸ್ಥೆ ತಿಳಿಸಿದೆ.